**ಸಾಕ್ಷಿಗೆ ದಿನಾಂಕ 27.09.2024 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. ತಿಮ್ಮೆಗೌಡ ವಕೀಲರಿಂದ:**

**1.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 1 | ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ |
| ನಿ.ಪಿ 2 | ಪ್ರಥಮ ಹೇಳಿಕೆಯ ದೃಢೀಕೃತ ಪ್ರತಿ |
| ನಿ.ಪಿ 3 | ಭಾರತ ದಂಡ ಸಂಹಿತೆ ಕಲಂ 304(ಎ) ರಡಿ ನೀಡಿದ ವರದಿಯ ದೃಢೀಕೃತ ಪ್ರತಿ. |
| ನಿ.ಪಿ 4 | ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ |
| ನಿ.ಪಿ 5 | ಕಚ್ಚಾ ನಕಾಶೆಯ ದೃಢೀಕೃತ ಪ್ರತಿ |
| ನಿ.ಪಿ 6 | ಶವ ತನಿಖಾ ವರದಿ ದೃಢೀಕೃತ ಪ್ರತಿ |
| ನಿ.ಪಿ 7 | ಶವ ಪರೀಕ್ಷಾ ವರದಿ ದೃಢೀಕೃತ ಪ್ರತಿ |
| ನಿ.ಪಿ 8 | ಎಂ ವಿ ಐ ವರದಿಯ ದೃಢೀಕೃತ ಪ್ರತಿ |
| ನಿ.ಪಿ 9 | ಕಲಂ 133 ರಡಿ ನೀಡಿದ ನೋಟೀಸು |
| ನಿ.ಪಿ 10 | ಕಲಂ 133 ರಡಿ ನೀಡಿದ ನೋಟೀಸಿಗೆ ನೀಡಿದ ಉತ್ತರ |
| ನಿ.ಪಿ 11 | ಎಂ ಎಲ್ ಸಿ ಇಂಟಿಮೇಶನ್ ದೃಢೀಕೃತ ಪ್ರತಿ |
| ನಿ.ಪಿ 12 | ಆರ್ ವಿ ಆಸ್ಪತ್ರೆಯವರು ನೀಡಿದ ಸಾವಿನ ಸಂಕ್ಷಿಪ್ತ ವರದಿಯ ದೃಢೀಕೃತ ಪ್ರತಿ |

| | |
|---|---|
| ನಿ.ಪಿ 13 | ದೋಷಾರೋಪಣ ಪತ್ರದ ದೃಢೀಕೃತ ಪ್ರತಿ |
| ನಿ.ಪಿ 14 ರಿಂದ 19 | 6 ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆಗಳು (ಮೂಲದಾಖಲೆಗಳನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |
| ನಿ.ಪಿ 20 | ಮರಣ ಪ್ರಮಾಣ ಪತ್ರ |

**3.** ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀಸವಾಲುಃ 1ನೇ ಎದುರುದಾರರ ಪರ ಏಕಪಕ್ಷೀಯವಾಗಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀಸವಾಲುಃ 2ನೇ ಎದುರುದಾರರ ಪರ ಶ್ರೀ. ಜಿ ಎಸ್ ವಕೀಲರಿಂದಃ

4. ನನ್ನ ಪತಿಗೆ ಮೂರು ಜನ ಕಿರಿಯ ಸಹೋದರರು ಇರುತ್ತಾರೆ. ನಮ್ಮ ಕುಟುಂಬಕ್ಕೆ ಪಡಿತರ ಚೀಟಿ ಇರುತ್ತದೆ. ಅರ್ಜಿದಾರ ಸಂಖ್ಯೆ- 5 ರವರು ನನ್ನ ಪತಿಯ 2ನೇ ಕಿರಿಯ ಸಹೋದರ ಜೊತೆಗೆ ವಾಸವಿದ್ದಾರೆ. ನಾನು ಬೇರೆಯವರ ಮನೆ ಕೆಲಸ ಮಾಡಿ ದಿನಕ್ಕೆ 200-300 ಸಂಬಳ ಸಂಪಾದಿಸುತ್ತಿದ್ದೇನೆ. ನನ್ನ ಪತಿ ತಿಂಗಳಿಗೆ 25 ಸಾವಿರ ಸಂಪಾದಿಸುತ್ತಿದ್ದರು ಎಂದು ದಾಖಲೆಗಳನ್ನು ಹಾಜರು ಪಡಿಸದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಅಪಘಾತದ ನಂತರ ನನ್ನ ಪತಿಯನ್ನು ಹರ್ಷ ಆಸ್ಪತ್ರೆಗೆ ಕರೆದುಕುಂಡು ಹೋಗಿರುತ್ತಾರೆ. ಹರ್ಷ ಆಸ್ಪತ್ರೆಯ ಎಂ ಎಲ್ ಸಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು

ಎಂದರೆ ಸರಿ. ಹರ್ಷ ಆಸ್ಪತ್ರೆಗೆ ನನ್ನ ಪತಿಯನ್ನು ನಮ್ಮ ಸಂಬಂಧಿಕರು ಸೇರಿಸಿರುತ್ತಾರೆ ಎಂದರೆ ಸರಿ. ನನ್ನ ಪತಿಯೇ ಸ್ವತಃ ದ್ವಿಚಕ್ರ ವಾಹನವನ್ನು ಚಲಾಯಿಸಿ ಜಾರಿ ಬಿದ್ದು ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ನನ್ನ ಪತಿಯೇ ಸ್ವತಃ ದ್ವಿಚಕ್ರ ವಾಹನವನ್ನು ಚಲಾಯಿಸಿ ಜಾರಿ ಬಿದ್ದು ಅಪಘಾತ ಮಾಡಿಕೊಂಡಿರುತ್ತಾರೆ ಎಂದು ದೂರು ನೀಡಿದರೆ ಪರಿಹಾರ ಸಿಗುವುದಿಲ್ಲ ಎಂದು ಹಿಂಬದಿ ಸವಾರನಾಗಿದ್ದರು ಎಂದು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಹಿನ್ನಲೆಯನ್ನು ಸರಿಪಡಿಸುವುದಕ್ಕೋಸ್ಕರ ಒಂದು ದಿನ ತಡವಾಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ಹರ್ಷ ಆಸ್ಪತ್ರೆಯ ಎಂ ಎಲ್ ಸಿ ದಾಖಲೆಯಲ್ಲಿ ನನ್ನ ಪತಿಯೇ ಸ್ವತಃ ದ್ವಿಚಕ್ರ ವಾಹನವನ್ನು ಚಲಾಯಿಸಿ ಜಾರಿ ಬಿದ್ದು ಅಪಘಾತ ಮಾಡಿಕೊಂಡಿರುತ್ತಾರೆ ಎಂದು ನಮೂದಾಗಿದ್ದೆ ಎಂದರೆ ನಾವು ಏನು ಬರೆದುಕೊಟ್ಟಿರುವುದಿಲ್ಲ. ಆ ರೀತಿ ಬರೆದಿದ್ದರೂ ಕೂಡ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಕತೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕೆಎ-52-ಕೆ-4249 ವಾಹನ ಅಪಘಾತದಲ್ಲಿ ಭಾಗಿಯಾಗಿದೇ ಇದ್ದರೂ ಕೂಡ ಸೇರ್ಪಡೆ ಮಾಡಿ ಹಾಗೂ ಲೋಕೇಶ್ ಎನ್ನುವವರು ದ್ವಿಚಕ್ರ ವಾಹನವನ್ನು ಚಾಲನೆ ಮಾಡದೇ ಇದ್ದರೂ ಕೂಡ ಚಾಲನೆ ಮಾಡುತ್ತಿದ್ದನು ಎಂದು ಸುಳ್ಳು ದೋಷಾರೋಪಣ ಪಟ್ಟಿಯನ್ನು ಪೊಲೀಸರೊಂದಿಗೆ ಶಾಮೀಲಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಕೆಎ-52-ಕೆ-4249 ವಾಹನದ ಮೇಲೆ ಸುಳ್ಳು ದೂರು ನೀಡಿರುವುದರಿಂದ 2ನೇ ಎದುರುದಾರರ ವಿಮಾ ಪರಿಹಾರ ನೀಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ,

7. ನನ್ನ ಪತಿಗೆ ಅಪಘಾತದಲ್ಲಿ ದೊಡ್ಡಗಾಯಗಳಾಗಿರಲಿಲ್ಲ ಅವರು ಬೇರೆ ಕಾರಣಗಳಿಂದ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿಯ ಅಂತ್ಯಕ್ರಿಯೆಗೆ ಮತ್ತು ಇತರೆ ಖರ್ಚುಗಳಿಗೆ 2 ಲಕ್ಷ ರೂಪಾಯಿಗಳ ಹಣ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**